30.	Secretary	-	-	-	1	-	1
31.	Office Superintendent	-	-	-	5	5	-
32.	First Division Assistant	-	-	-	6	6	-
33.	Second Division Assistant	-	-	-	13	12	1
34.	Clerk-cum-Typist (one S.D.A. is working against this post)	-	-	-	1	1	-
35.	Dinen Clerk	-	-	-	1	1	-
36.	Stenographer (One F.D.A. is working against this post)	-	-	-	1	1	-
37.	Typist (One F.D.A. is working against this post)	-	-	-	3	3	-
38.	Receptionist	-	-	-	2	1	1
39.	Group 'D'	-	-	-	339	29	49

ಎಂಟನೆಯ ವರ್ಗದ ಕನ್ನಡ ಭಾಷೆಯ ಪಠ್ಯಪುಸ್ತಕಗಳು ಅಲಭ್ಯ.

1729: ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):–

ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 8ನೇ ವರ್ಗದ ಕನ್ನಡ ಭಾಷೆಯ ಪಠ್ಯಪುಸ್ತಕಗಳು ಇಲ್ಲಿಯವರೆಗೆ ಲಭ್ಯವಿರುವುದು ನಿಜವೇ;

ಆ) ಈ ಪ್ರಕಾರ ಪಠ್ಯಪುಸ್ತಕಗಳು ಲಭ್ಯವಿಲ್ಲದಿದ್ದರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ;

ಇ) ರಾಜ್ಯದಲ್ಲಿ ಕನ್ನಡ ಭಾಷೆಯ ಪಠ್ಯಪುಸ್ತಕಗಳ ವ್ಯವಸ್ಥೆ ಸರ್ಕಾರ ಮಾಡಲು ಸಾಧ್ಯವಿಲ್ಲದಿದ್ದರೇ

ನಾವು ಕನ್ನಡಿಗರು ಕನ್ನಡಾಭಿಮಾನಿಗಳು, ಕನ್ನಡದಲ್ಲಿಯೇ ವ್ಯವಹಾರ ಎಂಬುದು ಕಾರ್ಯರೂಪಕ್ಕೆ ಬರಬಹುದೇ;

ಈ) ಮುಂದೆ ಈ ಅವ್ಯವಸ್ಥೆಯಾಗದಂತೆ ಮಾಡಿ ನಮ್ಮ ಹೈದ್ರಾಬಾದ್ ಕರ್ನಾಟಕ ಆಂಧ್ರಗಡೀ ಪ್ರಾಂತ್ಯದ ವಿದ್ಯಾರ್ಥಿಗಳಿಗೆ ಕನ್ನಡ ಸರಳವಾಗಿ ಕಲಿಯಲು ಸರ್ಕಾರ ಅವಕಾಶ ಕಲ್ಪಿಸುವುದೇ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):–

ಅ) ನಿಜ.

ಆ) ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ಲಭ್ಯವಿರುವ ಪುಸ್ತಕಗಳಿಂದ ತೊಂದರೆಯಾಗದಂತೆ ಪಾಠ ಮಾಡಲು ಈಗಾಗಲೇ ಆದೇಶವನ್ನು ನೀಡಲಾಗಿದೆ.

ಇ) 1993–94ನೇ ಸಾಲಿನಲ್ಲಿ ಯಾವ ಪಠ್ಯಪುಸ್ತಕಗಳ ಸರಬರಾಜಿನಲ್ಲಿಯೂ ಕೊರತೆ ಉಂಟಾಗದಂತೆ ನೋಡಿಕೊಳ್ಳಲು ಕ್ರಮ ಕೈಗೊಂಡಿದೆ.

ಈ) ಕಲ್ಪಿಸಲಾಗುವುದು.

ರಾಜ್ಯದಲ್ಲಿ ಮಕ್ಕಳ ಅಭಿರುಚಿಗೆ ತಕ್ಕಂತೆ ವಿದ್ಯಾಭ್ಯಾಸದ ವ್ಯವಸ್ಥೆ

1825: ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ಆ ಮಕ್ಕಳಿಗೆ ಆಸಕ್ತಿ ಇರುವ ವಿಷಯಗಳನ್ನು ಪರಿಗಣಿಸಿ ಅವರ ಅಭಿರುಚಿಗೆ ತಕ್ಕ ವಿದ್ಯಾಭ್ಯಾಸದ ವ್ಯವಸ್ಥೆ ಮಾಡಬಾರದೇಕೆ;

ಆ) ಇದರಿಂದ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಪಾಲಕರಿಗೂ ಸಹ ಆಸಕ್ತಿ ಉಂಟಾಗಿ ವಿದ್ಯಾಭ್ಯಾಸಕ್ಕೆ ಬರುವುದಿಲ್ಲವೆ;

ಇ)ಇಂತಹ ವಿದ್ಯಾಭ್ಯಾಸದಿಂದ ಮಕ್ಕಳು ಯಾವ ಉದ್ಯೋಗದ ಅವಕಾಶಕ್ಕಾಗಿ ಆಶಿಸದೇ ತಮ್ಮ ಸ್ವಂತ ನೆಲಗಟ್ಟು ಮೇಲೆ ನಿಲ್ಲುವುದಿಲ್ಲವೆ;

ಈ) ಈಗ ಸರ್ಕಾರ ಅಕ್ಷಯ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಹಣವನ್ನು ನೀಡಿದರೆ ಕೆಲವು ಜನ ಪಾಲಕರು ಮಕ್ಕಳ ಹಾಜರಿಗಾಗಿ ಶಿಕ್ಷಕರೊಂದಿಗೆ ತಕರಾರು ಮಾಡುವುದಿಲ್ಲವೇ;

ಉ) ಇದರಿಂದ ಸರ್ಕಾರವೇ ಪಾಲಕರ ಹಾಗೂ ಶಿಕ್ಷಕರ ಮಧ್ಯೆ ತಕರಾರು ಹುಟ್ಟಿಸಿದಂತಾಗುವುದಿಲ್ಲವೇ;

ಊ) ಅದಕ್ಕಾಗಿ ವಿದೇಶಗಳಂತೆ ನಮ್ಮ ಭಾಗದಲ್ಲಿ ಸಹ ವಿದ್ಯಾರ್ಥಿಯ ಅಭಿರುಚಿಯಂತೆ ಶಿಕ್ಷಣ ವ್ಯವಸ್ಥೆ ಮಾಡಿದರೆ ಯಾವ ತಕರಾರು ಇಲ್ಲದೇ ವಿದ್ಯಾಭ್ಯಾಸವಾಗಿ ವಿದ್ಯಾರ್ಥಿ ಜೀವನೋಪಾಯಕ್ಕಾಗಿ ಸಹ ಅನುಕೂಲವಾಗುವುದಿಲ್ಲವೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಣವು ಎಲ್ಲರಿಗೂ ಸಮಾನವಾಗಿರಬೇಕು. ಪ್ರೌಢಶಿಕ್ಷಣವನ್ನು ಪೂರೈಸಿದ ನಂತರವೇ ವಿದ್ಯಾರ್ಥಿಗಳು ಅವರ ಅಭಿರುಚಿಗೆ ತಕ್ಕಂತೆ ವಿಷಯವನ್ನು ಆಯ್ದುಕೊಳ್ಳಲು ಅವಕಾಶವಿದೆ.